ಆಗುತ್ತದೆ ? ಈಗ ವಿಂಡಿಯಂ ಟ್ರೈಂ ಲಿಫ್ಟ್ ಇರಿಗೇಷನ್‌ಗೆಂದು ಸುಮಾರು ೪೨ ಕೋಟಿ ರೂಪಾಯಿ ಗಳನ್ನು ಇಟ್ಟಿದ್ದೆವು. ಅದು ಪೂರ್ಣವಾಗುವುದಿಲ್ಲ. ಇಂತಹ ಯೋಜನೆಗಳಿಗೆ ಬಡ್ಜೆಟ್‌ನಲ್ಲಿ ಟೋಕನ್ ಗ್ರಾಂಟ್ ಇಟ್ಟು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಮುಖಾಂತರ ಹಣ ರೂಡಿಸಿಕೊಳ್ಳುವುದಕ್ಕೆ ಅನು ಕೂಲವಾಗುತ್ತದೆ. ಆದ್ದರಿಂದ ನಾವು ಈ ಯೋಜನೆಯನ್ನು ಪಟ್ಟಿಯಲ್ಲಿ ಸೇರಿಸಿದ್ದೇವೆಂದು ಉತ್ತರ ಹೇಳಿದ್ದೇನೆ. ಇನ್ನು ಮಾನ್ಯ ಸದಸ್ಯರು ಮಾತನಾಡುತ್ತಾ ಹೇಳಿದರು ಹೈ ಮ್ಯಾಗ್ನಿಟ್ಯೂಡ್ ವರ್ಕ್ ಎಂದರೆ ಅರ್ಥ ಗೊತ್ತಿಲ್ಲವೆಂದು. ಇಂತಹ ಕಾರ್ಪೊರೇಷನ್ ಮುಖಾಂತರ ಸಂಪನ್ಮೂಲಗಳನ್ನು ರೂಡಿಸಿಕೊಳ್ಳುವ ದೃಷ್ಟಿಯಿಂದ ಆ ಪದವನ್ನು ಉಪಯೋಗಿಸಲಾಗಿದೆ. ಈ ಯೋಜನೆಗೆ ಮುಖ್ಯ ವಾಗಿ ನಮಗೆ ಸಂಪನ್ಮೂಲಗಳ ಕೊರತೆಯಿಂದ ಡಿಲೇ ಆಗಿದೆ. ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ನಿಯಮಗಳ ಪ್ರಕಾರ ರಿಜಿಸ್ಟರ್ ಮಾಡಿಸಿರಬೇಕು. ಅದಕ್ಕೆ ಸಂಬಂಧಪಟ್ಟ ಬೈಲಾ ಮಾಡಬೇಕು. ಗೌರ್ನಮೆಂಟ್ ಆಫ್ ಇಂಡಿಯಾ ಪರ್ಮಿಷನ್ ಪಡೆದುಕೊಳ್ಳಬೇಕು ಈ ಎಲ್ಲಾ ಕಾರಣಗಳಿಂದ ಸ್ವಲ್ಪ ಡಿಲೇ ಆಗಿದೆ. ಇನ್ನೂ ಕೆಲವು ಪಾರ್ಮಲಿಟೀಸ್ ಮಾಡಬೇಕಾಗಿರುವುದರಿಂದ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಇನ್ನೂ ಆಗಿಲ್ಲ. ಅದಾದ ತಕ್ಷಣ ನಾವು ಸಂಪನ್ಮೂಲಗಳನ್ನು ರೂಡಿಸಿಕೊಂಡು ಯಾವುದಕ್ಕೆ ಆದ್ಯತೆ ಯನ್ನು ಕೊಡಬೇಕೋ ಅದಕ್ಕೆ ಆದ್ಯತೆಯನ್ನು ಕೊಟ್ಟು ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ.ಪೆಚ್. ಶ್ರೀನಿವಾಸ್.—ಈಗ ಆಯವ್ಯಯದಲ್ಲಿ ಹೇಗಿದ್ದರೂ ಅವಕಾಶ ಮಾಡಿದ್ದೀರಿ. ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಬರುವ ತನಕ ಕಾಯಬೇಕಾಗಿಲ್ಲ. ನಿಮ್ಮ ಇಲಾಖೆಯ ಮುಖಾಂತರ ಈ ಯೋಜನೆಯನ್ನು ಕಾರ್ಯಗತ ಮಾಡಿಸಬಹುದು. ಬಡ್ಜೆಟ್‌ನಲ್ಲಿ ಸ್ವಲ್ಪ ಸ್ವಲ್ಪವೇ ಹಣ ಸೇರಿಸಿ ಇಷ್ಟರಲ್ಲಿ ಈ ಯೋಜನೆಯನ್ನು ಪೂರ್ತಿ ಗೊಳಿಸಬಹುದಿತ್ತು. ಈ ಯೋಜನೆಯಿಂದ ಜನತೆಗೆ ಅನು ಕೂಲವಾಗುವ ದೃಷ್ಟಿಯಿಂದ ಜನತೆಯಿಂದ ಬೇಕಾದರೆ ತಾವು ಹಣವನ್ನು ಸಂಗ್ರಹಣೆ ಮಾಡಿದರೆ ಅವರು ಸಹಹಣ ಕೊಡುವುದಕ್ಕೆ ತಯಾರಾಗಿದ್ದಾರೆ. ಈ ಹಿಂದೆಲಿಫ್ಟ್ ಇರಿಗೇಷನ್‌ಸೊಸೈಟಿ ಎಂದು ಮಾಡಿದ್ದರು. ಈ ದೃಷ್ಟಿಯಿಂದ ಜನತೆ ಸ್ವಲ್ಪ ಪಾಟ್ಟಿಗೆ ಪಾಲ್ಗೊಳ್ಳುವುದಕ್ಕೆ ಸಾಧ್ಯತೆ ಇದೆ.ಇಂತಹ ಸಂದರ್ಭಗಳು ಇರುವುದರಿಂದ ಮಾನ್ಯ ಮಂತ್ರಿಗಳು ಆದ್ಯತೆಯನ್ನು ಕೊಟ್ಟು ಈ ಯೋಜನೆಯನ್ನು ಪೂರ್ಣ ಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್.ಡಿ. ದೇವೇಗೌಡ.—ಈ ಸಂದರ್ಭದಲ್ಲಿ ಒಂದು ಆಶ್ವಾಸನೆಯನ್ನು ಕೊಡುವುದಕ್ಕೆ ನಾನು ಇಷ್ಟಪಡುತ್ತೇನೆ. ಮಾನ್ಯ ಸದಸ್ಯರು ಜನರಿಂದ ೨೫ ಪರ್ಸೆಂಟ್‌ನಷ್ಟು ಹಣವನ್ನು ಕೊಡಿಸಿ ಕೊಡುವುದಾದರೆ ನಾನು ಈಗಲೇ ಪ್ರಾರಂಭಿಸುತ್ತೇನೆ.

ಸರ್ಕಾರದ ೩೦೬ನೇ ಹೆಡ್ ಆಫ್ ಅಕೌಂಟ್ ಬಗ್ಗೆ

೧೩೨ (೧೨೨) ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).—ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ, ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸರ್ಕಾರದ ೩೦೬ನೇ ಹೆಡ್ ಆಫ್ ಅಕೌಂಟ್ ಮೇರೆಗೆ ಸಣ್ಣ ನೀರಾವರಿ ಅಭಿವೃದ್ಧಿ ಕಾಮಗಾರಿ ೧೯೮೬-೮೭ರಲ್ಲಿ ನೀಡಿದ ಹಣವೆಷ್ಟು ?

ಆ) ಈ ಮೇರೆಗೆ ೩೦-೧೨-೧೯೮೬ಕ್ಕೆ ಕಾಮಗಾರಿಗಳಿಗಾಗಿ ಖರ್ಚು ಮಾಡಿರ ಹಣವೆಷ್ಟು ?

ಇ) ಆ ಪೈಕಿ ಸರ್ಕಾರಿ ಸಿಬ್ಬಂದಿ ವರ್ಗ ಹಾಗೂ ದಿನಗೂಲಿ ಕಾರ್ಮಿಕರ ಸಂಬಳಕ್ಕೆ ಖರ್ಚು ಮಾಡಿದ ಹಣ ಎಷ್ಟು ?

ಈ) ಸಿಬ್ಬಂದಿ ವರ್ಗದವರ ಸಂಬಳವನ್ನು ಕಾಮಗಾರಿ ಕೆಲಸದ ಬಾಬಿಗೆಂದು ಪರಿಗಣಿಸದೆ ಆಯಾ ಸಿಬ್ಬಂದಿ ವರ್ಗದವರ ಸಂಬಳ ಬಾಬಿಗೆ ಖರ್ಚು ಮಾಡಿದ ಪೊತ್ತವೆಂದು ಪರಿಗಣಿಸಲಾಗುವುದೇ?

ಶ್ರೀ ಹೆಚ್.ವಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ)	೩೦೬ (ಯೋಜನೆ)	೧೫.೮೪ ಲಕ್ಷ ರೂ.ಗಳು
	೩೦೬ (ಯೋಜನೇತರ)	೧೧೮೧.೬೫ ಲಕ್ಷ ರೂ.ಗಳು
	ಒಟ್ಟು	೧೧೯೭.೪೯ ಲಕ್ಷ ರೂ.ಗಳು

ಅ)	ಖಂಟ (ಯೋಜನೆ)	೨೦.೬೯ ಲಕ್ಷ ರೂ.ಗಳು
	ಖಂಟ (ಯೋಜನೇತರ)	೮೬.೬೫ ಲಕ್ಷ ರೂ.ಗಳು
	ಒಟ್ಟು	೮೮೭.೩೨ ಲಕ್ಷ ರೂ.ಗಳು

		ಪರ್ಕ್ ಚಾರ್ಜ್ ಸಿಬ್ಬಂದಿ	ದಿನಗೂಲಿ ನೌಕರರು
ಇ)	ಖಂಟ (ಯೋಜನೆ) ೧	೧-೦೧ ಲಕ್ಷ ರೂ.ಗಳು	೧.೨೦ ಲಕ್ಷ ರೂ.ಗಳು
	ಖಂಟ (ಯೋಜನೇತರ)	೨೯.೬೦ ಲಕ್ಷ ರೂ.ಗಳು	೧೧೮.೪೫ ಲಕ್ಷ ರೂ.ಗಳು
	ಒಟ್ಟು	೩೦.೬೧ ಲಕ್ಷ ರೂ.ಗಳು	೧೧೯.೬೫ ಲಕ್ಷ ರೂ.ಗಳು

ಈ) ವರ್ಕ್ ಚಾರ್ಜ್ ಸಿಬ್ಬಂದಿ ಮತ್ತು ದಿನಗೂಲಿ ನೌಕರರ ಸಂಬಳವನ್ನು ಕೆಲಸಗಳ ಲೆಕ್ಕಕ್ಕೆ ನೇಮಿಸಿರುವುದರಿಂದ ಸಂಬಳ ಬಾಬಿಗೆ ಮಾಡಿದ ಮೊತ್ತವೆಂದು ಪರಿಗಣಿಸುವುದು ಸಾಧ್ಯವಿಲ್ಲ.

ಶ್ರೀ ಬಾಬುರೆಡ್ಡಿ ತುಂಗಳ್.—ಮಾನ್ಯ ಅಧ್ಯಕ್ಷರೆ ಯೋಜನೆ ಪೆಚ್ಚಿಗಳಿಗಿಂತ ಯೋಜನೇತರ ಪೆಚ್ಚಿಗಳೇ ಜಾಸ್ತಿ ಇದೆ. ಯೋಜನೇತರ ಪೆಚ್ಚಿಗಳು ಯಾವ ರೀತಿಯಲ್ಲಿ ಜಾಸ್ತಿಯಾಗಿವೆ ?

ಶ್ರೀ ಹೆಚ್.ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ಕೇಳಿರುವಂತಹ ಹೆಡ್ ಆಫ್ ಅಕೌಂಟಿನಲ್ಲಿ ಇರತಕ್ಕಂತಹ ಹಣವನ್ನು ನಾವು ಈ ಯೋಜನೇತರ ಪೆಚ್ಚಿಗಳಿಗೆ ಹೆಚ್ಚು ಖರ್ಚು ಮಾಡುತ್ತೇವೆ. ಆದ್ದರಿಂದ ಈ ಉತ್ತರವನ್ನು ಕೊಟ್ಟಿದ್ದೇನೆ. ಈಗ ಸಣ್ಣ ಸಣ್ಣ ಯೋಜನೆಗಳಿಗೆ ಸುಮಾರು ೩೨–೩೩ ಕೋಟಿ ರೂಪಾಯಿಗಳನ್ನು ಇಟ್ಟು ಕೆಲಸ ಮಾಡಿಸುತ್ತೇವೆ. ಈ ಹೆಡ್ ಆಫ್ ಅಕೌಂಟಿನಲ್ಲಿ ನಿರ್ವಹಣಾ ಪೆಚ್ಚಿ ಕೂಡ ಬರುತ್ತದೆ. ಬೇರೆ ರೀತಿಯಲ್ಲಿ ಖರ್ಚು ಮಾಡುವುದಕ್ಕೆ ಬರುವುದಿಲ್ಲ.

ಕಾವೇರಿ ಜಲವಿವಾದ

೧೩೩ (೩೦೫) ಶ್ರೀ ಡಿ.ಎ. ಚಿನ್ನಪ್ಪ (ಪುಡಿಕೇರಿ).—ಮಾನ್ಯ ಲೋಕೋಪಯೋಗಿ, ನೀರಾವರಿ ಹಾಗೂ ಜಲಾನಯನ ಪ್ರದೇಶಾಭಿವೃದ್ಧಿ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕಾವೇರಿ ನೀರಿನ ವಿವಾದದ ಸಭೆಗಳಿಗೆ ಆದ ಖರ್ಚಿನ ಮೊತ್ತವೇನು ?

ಆ) ಈ ವಿಷಯವು ಇತ್ಯರ್ಥದ ಅಂತಿಮಘಟ್ಟದಲ್ಲಿದೆಯೇ ?

ಇ) ಇಲ್ಲದಿದ್ದಲ್ಲಿ ಇದು ಯಾವಾಗ ಇತ್ಯರ್ಥವಾಗಬಹುದು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕಾವೇರಿ ನೀರಿನ ವಿವಾದವು ೧೯೭೦ ರಿಂದಲೂ ಇದ್ದು ಖರ್ಚಿನ ವಿವರ ಒದಗಿಸಲು ಸಾಧ್ಯವಾಗದು.

ಆ) ಈ ವಿಷಯವನ್ನು ಸಂದಾನದ ಮೂಲಕವೇ ಬಗೆಹರಿಸಿಕೊಳ್ಳಬಹುದೆಂಬುದು ನಮ್ಮ ರಾಜ್ಯದ ನಿಲುವು ಮತ್ತು ಅದೇ ರೀತಿ ಮುಂದುವರಿಯುತ್ತಿದೆ.

ಇ) ಹೇಳಲಾಗುವುದಿಲ್ಲ.

ಶ್ರೀ ಡಿ.ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ, ಕಾವೇರಿ ನೀರಿನ ವಿವಾದದ ಬಗ್ಗೆ ನಡೆದಿರುವ ಸಭೆಗಳಿಗೆ ಸರ್ಕಾರವು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದೆ. ೧೯೭೦ನೇ ಇಸವಿಯಿಂದ ಈ ವಿವಾದದ ಬಗ್ಗೆ ಎಷ್ಟು ಸಾರಿ ಮೀಟಿಂಗ್ಸ್ ಆಗಿದೆ ? ಹಾಗು ಎಷ್ಟು ಖರ್ಚಾಗಿದೆ ? ಕಳೆದ ವರ್ಷದ ಬಜೆಟ್‌ನಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ಇಟ್ಟಿದ್ದೀರಿ ? ಈ ವರ್ಷದ ಬಜೆಟ್‌ನಲ್ಲಿ ಎಷ್ಟು ಹಣವನ್ನು ಇಡುತ್ತೀರಿ ?